ಎರಡನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂಗಳ
ನ್ಯಾಯಾಲಯ, ಚಿಕ್ಕೋಡಿ.

**22**ನೇ ಸಪ್ಟೆಂಬರ **2025**

ಸಿ.ಸಿ.ನಂ.**2784/2024**

| | |
|---|---|
| ದೂರುದಾರರು- | 1. ರಾಜ್ಯದ ಪರವಾಗಿ ಚಿಕ್ಕೋಡಿ ಸಂಚಾರ ಪೊಲೀಸ್ ಠಾಣೆ, |
| ವಿರುದ್ಧ | |
| ಆಪಾಧಿತ- | 1. ವಿಜಯ ಶಿವಾಜಿ ಭಾಂಡವಲಕರ,<br>ವಯಸ್ಸುಃ 48 ವರ್ಷ, ಉಃ ಗುತ್ತಿಗೆದಾರರು,<br>ವಾಸಃ ಉಳ್ಳಾಗಡ್ಡಿವಾಡಿ, ತಾಃ ಚಿಕ್ಕೋಡಿ,<br>ಜಿಃ ಬೆಳಗಾವಿ.<br><br>1. ವೀರಭದ್ರ ಕೃಷ್ಣಾ ಕೋಳಿ,<br>ವಯಸ್ಸುಃ 45 ವರ್ಷ, ಉಃ ಖಾಸಗಿ ನೌಕರಿ,<br>ವಾಸಃ ಉಳ್ಳಾಗಡ್ಡಿವಾಡಿ, ತಾಃ ಚಿಕ್ಕೋಡಿ,<br>ಜಿಃ ಬೆಳಗಾವಿ. |

ನಾನು ತೃಪ್ತಿ. ಧರಣಿ, ಬಿ.ಎ. ಎಲ್.ಎಲ್.ಎಂ., ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ. ದಂ. ಗಳ ನ್ಯಾಯಾಲಯ, ಚಿಕ್ಕೋಡಿ, ನಿಮ್ಮ ಮೇಲೆ ಈ ಕೆಳಗಿನಂತೆ ಆಪಾದನೆಯನ್ನು ಮಾಡುತ್ತಿದ್ದೇನೆ.

**ಆಪಾದನೆ**

**1)** ದಿನಾಂಕ 08-06-2024 ರಂದು 13-30 ಗಂಟೆ ಸಮಯದಲ್ಲಿ ಅಂಕಲಿ ಪೊಲೀಸ್ ಠಾಣಾ ಹದ್ದಿಯಲ್ಲಿ ಬರುವ ಉಳ್ಳಾಗಡ್ಡಿವಾಡಿ ಗ್ರಾಮದಲ್ಲಿ ಇರುವ, 2ನೇ ಆರೋಪಿಯು ನಿರ್ಮಿಸುತ್ತಿರುವ ಮನೆಯ ಮಾಳಿಗೆಯ ಮೇಲೆ, 1ನೇ ಆರೋಪಿಯು ಮನೆಯ ನಿರ್ಮಿಸುವ ಗುತ್ತಿಗೆದಾರ ಮತ್ತು 2ನೇ ಆರೋಪಿಯು ಹೊಸದಾಗಿ ಕಟ್ಟುತ್ತಿರುವ ಮನೆಯ ಮಾಲಿಕ ಇವರಿಬ್ಬರೂ ಕೂಡಿಕೊಂಡು ಮನೆಯ ಕೆಲಸ ಮಾಡಲು ಬಂದಿರುವ ಕಾರ್ಮಿಕರ ಕಡೆಗೆ ಲಕ್ಷ್ಯ ಕೊಡದೆ, ಕಾರ್ಮಿಕರ ಸುರಕ್ಷತೆಯ ಬಗ್ಗೆ ಯಾವುದೇ ಮುಂಜಾಗೃತಾ ಕ್ರಮ ಕೈಕೊಳ್ಳದೇ,

ಕೆಲಸ ಮಾಡುವವರ ಪ್ರಾಣಕ್ಕೆ ಹಾನಿ ಉಂಟಾಗಬಹುದೆಂದು ತಿಳಿದಿದ್ದರೂ, ನಿರ್ಲಕ್ಷತನದಿಂದ ಪಿರ್ಯಾದಿಯ ಗಂಡ ಗೋವಿಂದ ಭೀಮು ಸಮಗಾರ ರವರಿಗೆ, 1ನೇ ಆರೋಪಿಯಾದ ನೀವು 2ನೇ ಆರೋಪಿಯ ಹೊಸದಾಗಿ ನಿರ್ಮಿಸಿದ ಮನೆಯ ಗೋಡೆಗೆ ಬಣ್ಣ ಹಚ್ಚುವ ಕೆಲಸಕ್ಕೆ ಕರೆಯಿಸಿ, ಮನೆಯ ಪಶ್ಚಿಮ ಬದಿಯ ಗೋಡೆಗೆ ಬಣ್ಣ ಹಚ್ಚಿ ಸುವ ಕೆಲಸ ಮಾಡಿಸುವ ಕಾಲಕ್ಕೆ ಮನೆಯ ಪಶ್ಚಿಮ ಬದಿಯಲ್ಲಿ ಇದ್ದ ಕೆ.ಇ.ಬಿ ಯವರ ಮೇನ್ ವೈಯರಗೆ ಬಣ್ಣ ಹಚ್ಚುವ ರೋಲರ್ ಪೈಪ್ ತಾಗಿದ್ದರಿಂದ ಕರೆಂಟ ಶಾಕ ಹೊಡೆದು, ಪಿರ್ಯಾದಿಯ ಗಂಡ ಸ್ಥಳದಲ್ಲಿಯೇ ಮರಣ ಹೊಂದಿದ್ದು. ಆ ಮೂಲಕ 1 ಮತ್ತು 2ನೇ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ **304(ಎ)** ರ ಅಡಿಯಲ್ಲಿ ಅಪರಾಧ ಮಾಡಿರುತ್ತೀಯಾ ಎಂದು ಆರೋಪ ಮಾಡಲಾಗಿದೆ.

ಪ್ರಶ್ನೆ-1) ನಿನಗೆ ಈಗ ಓದಿ ಹೇಳಿದ ಅಪಾಧನೆಯನ್ನು ಅರ್ಥ ಮಾಡಿಕೊಂಡಿದ್ದೀಯಾ?

ಆರೋಪಿ ನಂ:1ಃ

ಆರೋಪಿ ನಂ:2ಃ

ಪ್ರಶ್ನೆ-2) ನೀನು ಅಪಾದನೆಯನ್ನು ಒಪ್ಪಿಕೊಳ್ಳುತ್ತೀಯಾ ಅಥವಾ ಕೇಸನ್ನು ನಡೆಸುತ್ತೀಯಾ?

ಆರೋಪಿ ನಂ:1ಃ

ಆರೋಪಿ ನಂ:2ಃ

(ಆಪಾದಿತರ ಹೇಳಿಕೆಗಳನ್ನು ನನ್ನ ಸಮ್ಮುಖದಲ್ಲಿ ಪಡದುಕೊಂಡಿದ್ದು ಸದರಿ ಹೇಳಿಕೆಗಳು ಆಪಾದಿತನ ಸಂಪೂರ್ಣ ಮತ್ತು ಸರಿಯಾದ ಹೇಳಿಕೆಗಳನ್ನು ಒಳಗೊಂಡಿರುತ್ತದೆ.)

**ಪ್ರಭಾರ 2ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಚಿಕ್ಕೋಡಿ.**